**ಕರ್ನಾಟಕ ಸರ್ಕಾರ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.884-2014**

**ಪಿ.ಡಬ್ಲ್ಯೂ: 17**

**ಸಿ.ಡಬ್ಲ್ಯೂ: 17**

ಸಾಕ್ಷಿದಾರರ **ಹೆಸರು** : ಸುರೇಶ

ತಂದೆಯ **ಹೆಸರು** : ಶಿವೇಗೌಡ

**ವಯಸ್ಸು** : 42 **ವರ್ಷ**

**ಉದ್ಯೋಗ** : ವ್ಯವಹಾರ

**ವಾಸಸ್ಥಳ** : ಬಾವಿಕೆರೆ

**ದಿನಾಂಕ: 19-10-2020 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ.**

*2012* ರಲ್ಲಿ ನಾವು ಬಾವಿಕೆರೆಯಲ್ಲಿ ಮನೆ ಕಟ್ಟಿಸುತ್ತಿದೆವು. ಆಗ ನಮಗೆ ಪರಿಚಯವಿದ್ದ ಕುಮಾರಣ್ಣ ಎನ್ನುವವರು ನಮ್ಮನ್ನು ಕರೆದುಕೊಂಡು ಬಾವಿಕೆರೆಯ ಗ್ರಾಮೀಣ ಬ್ಯಾಂಕ್‌ನಲ್ಲಿ ಸಾಲ ಕೊಡಿಸುತ್ತೇವೆಂದು ಹೇಳಿದರು. ಆಗ ನಾವು ಬ್ಯಾಂಕಿಗೆ ಹೋಗಿ ಅರ್ಜಿಗಳನ್ನು ನೀಡಿದೆವು. ಕೆಲ ದಿನಗಳ ನಂತರ ಮತ್ತೆ ನಮ್ಮನ್ನು ಕರೆಸಿ ಬ್ಯಾಂಕಿನ ಮ್ಯಾನೇಜರ್ ಆದ ಆರೋಪಿ ನಮ್ಮಿಂದ ಚೆಕ್ಕಿಗೆ ಸಹಿ ಪಡೆದರು. ಆಗ ಈಗಲೇ ಯಾಕೆ ಚೆಕ್ಕಿಗೆ ಸಹಿ ಪಡೆಯುತ್ತಿದೀರಿ ಎಂದು ಕೇಳಿದಾಗ ಲೋನ್ ನೀಡಬೇಕಾದರೆ ಮುಖ್ಯ ಶಾಖೆಗೆ ಸದರಿ ಚೆಕ್ಕುಗಳನ್ನು ಕಳುಹಿಸಬೇಕೆಂದು ನಮ್ಮ ಸಹಿ ಪಡೆದರು. ನಂತರ ಪೋಲೀಸರು ನಮ್ಮ ಮನೆಯ ಹತ್ತಿರ ನಾವು ಖಾತೆಯಲ್ಲಿ ನಕಲಿ ಬಂಗಾರದ ಒಡವೆಗಳನ್ನು ಇಟ್ಟು ಸಾಲ ಪಡೆದಿದ್ದೇವೆಂದು ಕೇಳಿದರು. ನಾನು ಯಾವುದೇ ರೀತಿಯ ಖಾತೆ ತೆರೆದು ಬಂಗಾರದ ಆಭರಣಗಳನ್ನು ಇಟ್ಟು ಹಣ ಪಡೆದಿಲ್ಲ ಎಂದು ತಿಳಿಸಿದೆನು. ನಂತರ ಬ್ಯಾಂಕಿನ ಮ್ಯಾನೇಜರ್ ಆದ ಆರೋಪಿಯು ನಕಲಿ ಬಂಗಾರದ ಒಡವೆ ಇಟ್ಟು ಹಣ ಪಡೆದಿರುತ್ತಾರೆನ್ನುವ ವಿಷಯ ತಿಳಿಯಿತು. ಆರೋಪಿಯೇ ನಮ್ಮ ಮುಂದೆ ತಾನು ನಕಲಿ ಬಂಗಾರದ ಆಭರಣಗಳನ್ನು ಇಟ್ಟು ಹಣ ಪಡೆದಿದ್ದೇನೆಂದು ಒಪ್ಪಿಕೊಂಡನು. ಸಾಕ್ಷಿ ನಿಪಿ*5* ರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು ಅದನ್ನು ನಿಪಿ-*5*(ಬಿ) ಎಂದು ಗುರುತಿಸಲಾಯ್ತು.

**ಪಾಟೀ ಸವಾಲು : ಆರೋಪಿ ಪರ** ಶ್ರೀ ಎಂ ಕೆ ಟಿ **ವಕೀಲರಿಂದ.**

ಬ್ಯಾಂಕಿನಲ್ಲಿ ಹಣ ದುರುಪಯೋಗವಾದ ವಿಷಯ ಪೋಲೀಸರು ನನಗೆ ಹೇಳಿದ ನಂತರ ತಿಳಿಯಿತು. ನಾನು ಸುಮಾರು *25* ವರ್ಷಗಳಿಂದ ಬ್ಯಾಂಕಿನ ವ್ಯವಹಾರ ತಿಳಿದಿರುತ್ತೇನೆಂದರೆ ಸರಿ.

ನಾನು ಪೋಲೀಸರ ಮುಂದೆ ಹೇಳಿಕೆ ನೀಡಿದ್ದು, ಆದರೆ ಅದರ ದಿನಾಂಕ ನೆನಪಿಲ್ಲ. ಪೋಲೀಸರು ಹೇಳಿಕೆಯನ್ನು ಇಂಗ್ಲೀಷಿನಲ್ಲಿ ಬರೆದಿದ್ದು, ಅದನ್ನು ನಾನು ಓದಿರುವುದಿಲ್ಲ. ನಾನು ಬಾವಿಕೆರೆಯ ಗ್ರಾಮೀಣ ಬ್ಯಾಂಕಿನಲ್ಲಿ ಯಾವುದೇ ವ್ಯವಹಾರ ಮಾಡಿರುವುದಿಲ್ಲ. ಘಟನೆ ನಡೆದ *1* ವರ್ಷಗಳ ನಂತರ ಹೊಸ ಮ್ಯಾನೇಜರ್ ಬಂದಾಗ ನಾವು ಸಾಲ ಪಡೆದಿರುತ್ತೇವೆ. ಸಾಮಾನ್ಯವಾಗಿ ನಾವು ಯಾವುದೇ ಬ್ಯಾಂಕಿನ ವ್ಯವಹಾರ ಮಾಡುವಾಗ ಓದಿ, ಹೇಳಿ, ಕೇಳಿ ಸಹಿ ಮಾಡುತ್ತೇನೆಂದರೆ ಸರಿ. ನನಗೆ ಘಟನೆಯ ಬಗ್ಗೆ ಪೋಲೀಸರು ಹೇಳಿದ ನಂತರ ತಿಳಿದಿರುತ್ತದೆಂದರೆ ಸರಿ. ಆರೋಪಿಯು ಬ್ಯಾಂಕಿನಲ್ಲಿ ಏನು ವ್ಯವಹಾರ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಪೋಲೀಸರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ:** ಇರುವುದಿಲ್ಲ.

*(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)*

*ಓ. ಕೇ. ಸ. ಇ. ಎ. ಒ.*

Sd/-

***ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು***

***ಪ್ರ.ದ.ನ್ಯಾ.ದಂ.ರವರು,ತರೀಕೆರೆ.***